OCTOBER 23, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕು, ತಿಮ್ಮಾಪುರದ ಮುಧೋಳ ತಳಿ ಶ್ವಾನ ಹಾಗೂ ವಿಜಯವಾಡಾದ ರಾಮಪುರ ತಳಿ ಶ್ವಾನಗಳನ್ನು, ಗಡಿ ರಕ್ಷಣಾ ಪಡೆ – ಬಿ.ಎಸ್.ಎಫ್. ಅಧಿಕೃತವಾಗಿ, ಗಡಿಗಳ ಕಾವಲಿಗೆ ಸೂಕ್ತ ತರಬೇತಿ ನೀಡಿ, 'ಕೆ–9 ಹಾಂಡ್ಸ್ ಸ್ಕ್ವಾಡ್' ರೂಪಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ, 'ಆತ್ಮನಿರ್ಭರ ಭಾರತ' ಹಾಗೂ 'ವೋಕಲ್ ಫಾರ್ ಲೋಕಲ್' ಪ್ರಕಲ್ಪಗಳಡಿ, ಈ ಶ್ವಾನಗಳು ಈಗ ದೇಶ ಹಾಗೂ ಗಡಿ ರಕ್ಷಣೆಯ ಹೊಣೆ ಹೊತ್ತಿವೆ.**

<><><>

**2020ರ ಆಗಸ್ಟ್ ತಿಂಗಳ, 'ಮನ್ ಕಿ ಬಾತ್'ನಲ್ಲಿ, ಪ್ರಧಾನಮಂತ್ರಿಯವರು, ಮುಧೋಳ ಹಾಗೂ ರಾಮಪುರ ತಳಿ ಶ್ವಾನಗಳನ್ನು, ಗಡಿ ರಕ್ಷಣಾ ಪಡೆಗೆ ಸೇರಿಸುವ ಮಹತ್ವಾಕಾಂಕ್ಷೆ ವ್ಯಕ್ತಪಡಿಸಿ, ವಿಶೇಷವಾಗಿ ಉಲ್ಲೇಖಿಸಿದ್ದರು. 'ಉಕ್ಕಿನ ಮನುಷ್ಯ' ಸರದಾರ ವಲ್ಲಭ ಭಾಯಿ ಪಟೇಲ್ ಅವರ, ಜನ್ಮ ದಿನವಾದ, ಈ ತಿಂಗಳ 31 ರಂದು, ದೇಶಾದ್ಯಂತ ಆಯೋಜಿತ, ಐಕ್ಯತೆ ದಿನದ ಓಟ ಹಾಗೂ ಮಧ್ಯಪ್ರದೇಶದ ರಾಜ್ಯದ, ಗ್ವಾಲಿಯರ್ ಜಿಲ್ಲೆಯ, ಟೇಕನ್‌ಪುರದಲ್ಲಿ ಆಯೋಜಿತ ಕವಾಯತಿನಲ್ಲಿ, ಬಿ.ಎಸ್.ಎಫ್., ಕೆ–9 ಹಾಂಡ್ಸ್ ತಂಡ, ಪ್ರಥಮ ಬಾರಿಗೆ ಪಾಲ್ಗೊಳ್ಳಲಿದೆ.**

<><><>

**ಬಾಗಲಕೋಟೆ ಜಿಲ್ಲೆ, ಮುಧೋಳ ತಳಿ ಶ್ವಾನ ಸಂವರ್ಧನಾ ಕೇಂದ್ರ, ಬೀದರ ಪಶು ಚಿಕಿತ್ಸೆ, ಪಶು ಪಾಲನೆ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಲಗ್ನತೆ ಹೊಂದಿದೆ.**

<><><>

**ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬಾಗಲಕೋಟೆ ಜಿಲ್ಲೆ ಜಮಖಂಡಿಯ ಹಿರಿಯ ನ್ಯಾಯವಾದಿ, ರವೀಂದ್ರ ಹಳಿಂಗಳಿ.**

<><><>

**ನ್ಯಾಯವಾದಿ ರವೀಂದ್ರ ಹಳಿಂಗಳಿ ಧ್ವನಿ (35) ಸೆಕೆಂಡುಗಳು**

<><><>

**ಭಾರತ ಜಾಗತಿಕವಾಗಿ, ಗಣನೀಯ ಪ್ರಮಾಣದಲ್ಲಿ, ಅರಣ್ಯ ವ್ಯಾಪ್ತಿ ಹೊಂದಿರುವ, 9ನೇ ರಾಷ್ಟ್ರವಾಗಿ ಹೊರಹೊಮ್ಮಿದೆ. ಗ್ಲೋಬಲ್ ಫಾರೆಸ್ಟ್ ರಿಸೋರ್ಸ್ ಅಸೆಸ್ಮೆಂಟ್ – ಜಾಗತಿಕ ಅರಣ್ಯ ಸಂಪನ್ಮೂಲ ಸಮೀಕ್ಷೆ ವರದಿ ಉಲ್ಲೇಖಿಸಿ, ಕೇಂದ್ರ ಪರಿಸರ ಖಾತೆ ಸಚಿವ ಭೂಪೇಂದ್ರ ಯಾದವ್, ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ**

ಮೋದಿ ಅವರ ಮಾರ್ಗದರ್ಶನದಲ್ಲಿ, ಕೇಂದ್ರ ಸರ್ಕಾರ, ಸಾಮುದಾಯಿಕ ಸಹಭಾಗಿತ್ವದಲ್ಲಿ, ಅರಣ್ಯೀಕರಣ ಹಾಗೂ ವನ್ಯಸಂಪತ್ತಿನ ಸಂರಕ್ಷಣೆಗೆ, ಹಲವು ಮಹತ್ವದ ಕ್ರಮಗಳನ್ನು ಕೈಗೊಂಡಿದೆ, ಎಂದಿದ್ದಾರೆ.

<><><>

ಬೆಂಗಳೂರಿನ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಹಾಗೂ ಕೋಲಾರ ಜಿಲ್ಲೆ, ಬಂಗಾರಪೇಟೆಯ, ಉಪ ಜಿಲ್ಲೆ ರೈಲು ನಿಲ್ದಾಣದಲ್ಲಿ, ಜೈವಿಕ ತಂತ್ರಜ್ಞಾನದ ಹಸಿರು ಶೌಚಾಲಯ ಬಳಕೆ, ಬಯಲು ಬಹಿರ್ದೆಸೆ ಮುಕ್ತ ನೈರ್ಮಲ್ಯಯುತ ವಾತಾವರಣ, ರೈಲು ಕಂಬಿಗಳನ್ನು ಬಯಲು ಶೌಚದ ರೂಪವಾಗಿ ಬಳಸದಂತೆ, ಜನ ಜಾಗ್ರತಿ ಆಂದೋಲನ, ಜರುಗಿತು. ಸ್ವಚ್ಛ ಭಾರತ ಆಂದೋಲನದಡಿ, 5ನೇ ಆವೃತ್ತಿಯ, ವಿಶೇಷ ಸ್ವಚ್ಛತೆ ಜನಾಂದೋಲನ ನೈರುತ್ಯ ರೇಲ್ವೆ ಆಯೋಜಿಸಿತ್ತು.

<><><>

ವಿಶೇಷ ಸ್ವಚ್ಛತಾ ಆಂದೋಲನ 5.ಓ ಅಡಿ, ಒಟ್ಟು 493 ಹೊರಾಂಗಣ ಜನ ಜಾಗೃತಿ ಪ್ರಚಾರ ಅಭಿಯಾನದ ಜೊತೆಗೆ, 973 ಸ್ಥಳಗಳನ್ನು ಶುದ್ಧೀಕರಿಸಿ, 104 ವಾಹನಗಳನ್ನು ಶುಚಿ ಗೊಳಿಸಲಾಗಿದೆ ಎಂದು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ. 1 ಲಕ್ಷ 43 ಸಾವಿರ ಕಿಲೋ ತ್ಯಾಜ್ಯವನ್ನು ಸಂಗ್ರಹಿಸಿ, 34 ಲಕ್ಷ ರೂಪಾಯಿಗೆ ವಿಲೇವಾರಿ ಮಾಡಲಾಗಿದೆ. 8 ಸಾವಿರದ 7 ಚದರ ಅಡಿಗಳಷ್ಟು ಕಸ ತುಂಬಿದ್ದ ಜಾಗೆಯನ್ನು, ಶುಚಿಗೊಳಿಸಲಾಗಿದೆ. ಸ್ವಚ್ಛತೆ ಸಂಬಂಧಿ, 301 ಸಾರ್ವಜನಿಕ ದೂರುಗಳನ್ನು ಸಹ ಬಗೆಹರಿಸಲಾಗಿದೆ ಎಂದು, ಸಚಿವಾಲಯ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದೆ.

<><><>

ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯು.ಪಿ.ಐ.), ಆನ್ಲೈನ್ ಹಣಕಾಸು ವ್ಯವಹಾರಗಳು, ಸರಕು ಮತ್ತು ಸೇವಾ ತೆರಿಗೆ 2ನೇ ಹಂತದ ಸುಧಾರಣೆ ಹಾಗೂ ಸರಣಿ ಹಬ್ಬಗಳ ಹಿನ್ನೆಲೆ, 96 ಸಾವಿರದ 638 ಕೋಟಿ ರೂಪಾಯಿ ದಾಖಲಾಗಿದೆ ಎಂದು, ನ್ಯಾಶನಲ್ ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ, ಪ್ರಕಟಿಸಿದೆ. ಸೆಪ್ಟೆಂಬರ್ ತಿಂಗಳಿನಿಂದ ಇಲ್ಲಿಯ ವರೆಗೆ, ಶೇಕಡ 16 ರಷ್ಟು ಏರಿಕೆ ಹಾಗೂ ಈ ತಿಂಗಳಲ್ಲಿ ಶೇಕಡ 4 ರಷ್ಟು ಅಂದರೆ ನಿತ್ಯದ ವಹಿವಾಟು, 68 ಕೋಟಿಯಷ್ಟು ದಾಖಲಾಗಿದೆ.

<><><>

ಪ್ರಸಕ್ತ ದೀಪಾವಳಿ ಹಬ್ಬದಲ್ಲಿ, ವ್ಯಾಪಾರ, ವಹಿವಾಟು, 6 ಲಕ್ಷ ಕೋಟಿ ರೂಪಾಯಿ ದಾಟಿದ್ದು, ದೇಶದ ಆರ್ಥಿಕ ಇತಿಹಾಸದಲ್ಲಿ, ಹೊಸ ಮೈಲುಗಲ್ಲು ಸೃಷ್ಟಿಸಿದೆ. ಕಳೆದ ದೀಪಾವಳಿಗಿಂತ, ಈ ಬಾರಿ ಮಾರಾಟದಲ್ಲಿ ಶೇಕಡ 25 ರ ಷ್ಟ ಏರಿಕೆ ಕಂಡು ಬಂದಿದೆ ಎಂದು, ರಾಜ್ಯ ಬಿಜೆಪಿ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದೆ. ಜಿ.ಎಸ್.ಟಿ. ಕರ ದರಗಳ ಇಳಿಕೆ ಹಿನ್ನೆಲೆ ಹಾಗೂ ಪ್ರಧಾನಮಂತ್ರಿಯವರ, ಸ್ವದೇಶಿ ವಸ್ತುಗಳ ಬಳಕೆ ಕರೆಗೆ, ವ್ಯಾಪಕ ಸ್ಪಂದನೆ ದೊರೆತಿದೆ. ಶೇಕಡ 87 ರ ಷ್ಟ ಬಳಕೆದಾರರು, ಭಾರತೀಯ ಸರಕುಗಳ ಖರೀದಿಗೆ ಒತ್ತು ನೀಡಿದ್ದಾರೆ ಎಂದು, ತಿಳಿಸಿದೆ.

<><><>

ಸೆಪ್ಟೆಂಬರ್ ನಿಂದ ಡಿಸೆಂಬರ್ ವರೆಗೆ ಆಯೋಜಿತ, ಆತ್ಮನಿರ್ಭರ ಭಾರತ ಸಂಕಲ್ಪ ಅಭಿಯಾನದ ಹಿನ್ನೆಲೆ, ಕಲಬುರಗಿಯಲ್ಲಿ, ಸ್ವಾಭಿಮಾನಿ ಸ್ವದೇಶಿ ಮಳಿಗೆ ಸ್ಥಾಪಿಸಿ, ಸ್ವದೇಶಿ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸಲಾಗಿದೆ. ಸ್ವಾಭಿಮಾನಿ ಸ್ವದೇಶಿ ಮಳಿಗೆಯಲ್ಲಿ ಆತ್ಮನಿರ್ಭರ ಭಾರತ ಹಾಗೂ ಲೋಕಲ್ ಫಾರ್ ವೋಕಲ್ ಅಭಿಯಾನದ ಕುರಿತು, ನಾಗರಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

<><><>

ರಾಯಚೂರು ಗ್ರಾಮೀಣ ಭಾಗದ, ಗುಂಜಳ್ಳಿ ಬಸಪ್ಪ ಕೆರೆ ಏತ ನೀರಾವರಿ ಯೋಜನಾ ಸ್ಥಳಕ್ಕೆ, ಜಲ ಸಂಪನ್ಮೂಲ ಖಾತೆ ಸಚಿವ, ಡಿ.ಕೆ. ಶಿವಕುಮಾರ ಅವರೊಂದಿಗೆ, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್. ಬೋಸರಾಜು ಭೇಟಿ ನೀಡಿ, ಕಾಮಗಾರಿಯ ಪ್ರಗತಿ ಪರಿಶೀಲಿಸಿದರು. ಗುಂಜಳ್ಳಿ ಬಸಪ್ಪ ಕೆರೆ ಏತ ನೀರಾವರಿ ಯೋಜನೆ, ತುಂಗಭದ್ರಾ ನದಿಯಿಂದ,

ಗುಂಜಳ್ಳಿ ಕೆರೆ ಸೇರಿದಂತೆ, ಸುತ್ತ ಮುತ್ತಲಿನ 9 ಕೆರೆಗಳಿಗೆ, ನೀರು ತುಂಬಿಸುವ, 146 ಕೋಟಿ ರೂಪಾಯಿಗಳ, ಮಹತ್ವದ ಯೋಜನೆಯಾಗಿದೆ.

<><><>

ಆಕಾಶವಾಣಿಯ, ಬಹುಶ್ರುತ, ಮನ್ ಕಿ ಬಾತ್‌ನ, 127ನೇ ಆವೃತ್ತಿಗಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ, ವಿದೇಶಗಳ ಭಾರತೀಯರಿಗೆ, ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ, ಕೋರಿದ್ದಾರೆ. ನಮೋ ಆಪ್, My Gov.in ಜಾಲತಾಣ, ಅಥವಾ 1800-11-7800 ಗೆ ಕರೆ ಮಾಡಿ, ಸಾರ್ವಜನಿಕರು ನಾಳೆ ರಾತ್ರಿಯ ಒಳಗೆ, ತಮ್ಮ ಸಲಹೆಗಳನ್ನು, ದಾಖಲಿಸಬಹುದಾಗಿದೆ. ಈ ತಿಂಗಳ ಕೊನೆ ಭಾನುವಾರ, 26ನೇ ತಾರೀಖು, ಬೆಳಗ್ಗೆ 11 ಗಂಟೆಗೆ, ಮನದ ಮಾತು ಪ್ರಸಾರವಾಗಲಿದೆ.

<><><>

ಮಡಿಕೇರಿ ಸೇರಿದಂತೆ, ಕೊಡಗಿನ ಎಲ್ಲೆಡೆ, ಭಾರೀ ಮಳೆಯಾಗುತ್ತಿದೆ. ಕೊಡಗು ಜಿಲ್ಲೆಯ ಹಾರಂಗಿ ಜಲಾಶಯಕ್ಕೆ 8 ಸಾವಿರದ 200 ಕ್ಯೂಸೆಕ್ ಒಳ ಹರಿವು ದಾಖಲಾಗಿದೆ. ಜಲಾಶಯದಿಂದ 5 ಸಾವಿರ ಕ್ಯೂಸೆಕ್ ನೀರನ್ನು, ಹೊರ ಬಿಡಲಾಗುತ್ತಿದೆ. ಇತಿಹಾಸದಲ್ಲಿಯೇ ಮೊದಲ ಬಾರಿಗೆ, ಅಕ್ಟೋಬರ್‌ನಲ್ಲಿ ಹಾರಂಗಿ ಜಲಾಶಯ ಭರ್ತಿ ಆಗಿದೆ.

<><><>

ರಾಜ್ಯದಾದ್ಯಂತ ಇಂದು, ಗುಡುಗು ಸಹಿತ, ಜೋರಾದ ಗಾಳಿಯೊಂದಿಗೆ, ಚದುರಿದಂತೆ ವ್ಯಾಪಕವಾಗಿ, ಹಗುರದಿಂದ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆ ನಿರೀಕ್ಷಿಸಲಾಗಿದೆ. ಕರಾವಳಿ, ಮಲೆನಾಡು ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ನಾಡಿದ್ದು 25ರ ವರೆಗೆ, ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ, ಮಳೆ ಸಾಧ್ಯತೆ ಇದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.